# ವಾರ್ತಾ ಪತ್ರಿಕೆ

ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ನಂದಿನಗರ, ಅಂಚೆ ಸಂ. 06, ಬೀದರ–585 226

ಸಂಪುಟ–18, ಸಂಚಿಕೆ–2 | ಜುಲೈ–ಡಿಸೆಂಬರ್, 2022

## ಕುಲಪತಿಗಳವರ ಮುನ್ನುಡಿ



ವಿಶ್ವವಿದ್ಯಾಲಯವು ಜುಲೈ–ಡಿಸೆಂಬರ್, 2022ರ ಅವಧಿಯಲ್ಲಿ ಅನೇಕ ಸಹಯೋಗ ಭಾಗಿತ್ವ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಿದೆ ಎಂಬುದು ಸಂತೋಷದ ವಿಷಯವಾಗಿದೆ. ಕರ್ನಾಟಕ ಪಶುವೈದ್ಯಕೀಯ ಪರಿಷತ್, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ ಬೆಂಗಳೂರಿನ ವಿಶ್ವಪ್ರಾಣಿ ಆರೋಗ್ಯ ಸಂಸ್ಥೆ, ರೆಫರೆನ್ಸ್ ಪ್ರಯೋಗಾಲಯ, ಹೈದ್ರಾಬಾದನ ಮ್ಯಾನೇಜ್ ಸಂಸ್ಥೆಯೊಂದಿಗೆ ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ, ಕೇಂದ್ರೀಯ ಕುಕ್ಕುಟ ಅಭಿವೃದ್ಧಿ ಸಂಸ್ಥೆ, ಹೆಸರಘಟ್ಟದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಮತ್ತು ಈಶಾ ಫೌಂಡೇಷನ್‌ದೊಂದಿಗೆ ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು ಇವರು ಸಹಭಾಗಿತ್ವ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ.

ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶನಾಲಯ 6 ರಿಂದ 7ನೇ ಡಿಸೆಂಬರ್, 2022 ರಂದು "ಕರ್ನಾಟಕ ರಾಜ್ಯದಲ್ಲಿ" ಸುಸ್ಥಿರ ಜಾನುವಾರು ಅಭಿವೃದ್ಧಿಗಾಗಿ ಬಹು ಮಧ್ಯಸ್ಥಗಾರರ ನಡುವೆ "ಸೇತುವೆ ಸಂಶೋಧನೆ" ಮತ್ತು ವಿಸ್ತರಣೆ ಅಂತರಗಳ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು ಆಯೋಜಿಸಿತ್ತು. ಇಪ್ಪತ್ತು ಮಧ್ಯಸ್ಥ ಸಂಸ್ಥೆಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದವು. ಕಾರ್ಯಾಗಾರದ ನಡಾವಳಿಗಳು ಕರ್ನಾಟಕದ ಜಾನುವಾರು ವಲಯದಲ್ಲಿ ಪಾಲುದಾರರ ನಡುವೆ ಸಹಯೋಗವನ್ನು ಬೆಳೆಸುವ ಮತ್ತು ಪೋಷಿಸುವ ಮಾರ್ಗಗಳು ಮತ್ತು ವಿಧಾನಗಳ ಮೇಲೆ ಬೆಳಕು ಚೆಲ್ಲುತ್ತವೆ ಎಂದು ಆಶಿಸುತ್ತೇನೆ.

ವಿಶ್ವವಿದ್ಯಾಲಯದ ಎಲ್ಲಾ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿ ಸಮುದಾಯವು ವಿವೇಚನೆಯಿಂದ ತೊಡಗಿಸಿಕೊಳ್ಳಬೇಕು. ಅಂತಹ ಭಾಗವಹಿಸುವಿಕೆಯಲ್ಲಿ ಅವರ ವೃತ್ತಿಪರ ಕೌಶಲ್ಯಗಳು ಮತ್ತು ವ್ಯಕ್ತಿತ್ವ ಮತ್ತು ಸಂವಹನ ಕೌಶಲ್ಯಗಳನ್ನು ಸುಧಾರಿಸಲು ಅಗಾಧವಾದ ಅವಕಾಶವಿದೆ. ಈ ಸಂದರ್ಭದಲ್ಲಿ, ವಿವಿಧ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಸಾಂಸ್ಥಿಕಗೊಳಿಸುವ ಸಾಧ್ಯತೆಗಳನ್ನು ಹುಡುಕುವಂತೆ ಎಲ್ಲಾ ಶಿಕ್ಷಕರಿಗೆ ಪ್ರಾಮಾಣಿಕವಾಗಿ ಕರೆ ನೀಡುತ್ತೇನೆ. ನಮ್ಮ ವಿಶ್ವವಿದ್ಯಾಲಯವು ಒಂದು ಅಂತರ್–ಮಹಾವಿದ್ಯಾಲಯಗಳ ಕ್ರೀಡಾಕೂಟ–2022ನ್ನು ಯಶಸ್ವಿಯಾಗಿ ಆಯೋಜಿಸಿದೆ. ಕೂಟದ ಎಲ್ಲಾ ಸಂಘಟಕರು ಮತ್ತು ವಿಜೇತರನ್ನು ಅಭಿನಂದಿಸುತ್ತೇನೆ. ಕಪಪಮಿವಿವಿ ಯು ವಿದ್ಯಾರ್ಥಿಗಳಿಗೆ ಅತ್ಯುತ್ತಮ ಕ್ರೀಡಾ ಸೌಲಭ್ಯವನ್ನು ಒದಗಿಸಲು ಬದ್ಧವಾಗಿದೆ. ಆದರೆ, ವಿದ್ಯಾರ್ಥಿ ಸಮುದಾಯ ಈ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಅವರು ತಮ್ಮನ್ನು ತಾವು ಸದೃಢವಾಗಿರಿಸಿಕೊಳ್ಳಬೇಕು ಮತ್ತು ಅವರ ಶೈಕ್ಷಣಿಕ ಸಾಧನೆಗಳ ಮೇಲೆ ಕೇಂದ್ರೀಕರಿಸಬೇಕು. ಇವೆಲ್ಲ ಉತ್ತಮ ಜೂನಿಯರ್ ರಿಸರ್ಚ್ ಫೆಲೋಶಿಪ್ ಮತ್ತು ಸಿನಿಯರ್ ರಿಸರ್ಚ್ ಫೆಲೋಶಿಪ್ ಶ್ರೇಣಿಗಳು ಮತ್ತು ಫೆಲೋಶಿಪ್‌ಗಳ ಪರಿಭಾಷೆಯಲ್ಲಿ ಪ್ರತಿಫಲಿಸಬೇಕು. ವಿದ್ಯಾರ್ಥಿಗಳ ಎಲ್ಲಾ ಸಲಹೆಗಾರರು ನಿಯಮಿತವಾಗಿ ವಿದ್ಯಾರ್ಥಿಗಳ ಬಗ್ಗೆ ನಿಗಾ ಇಡಲು ಮತ್ತು ಅವರ ಪ್ರಗತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಲು ಕೋರುತ್ತೇನೆ.

ಅಂತಿಮವಾಗಿ, ಸುದ್ದಿ ಪತ್ರದ ಈ ಆವೃತ್ತಿಯನ್ನು ಹೊರತರಲು ವಿಸ್ತರಣಾ ನಿರ್ದೇಶಕರು ಮತ್ತು ಮುಖ್ಯ ಸಂಪಾದಕರ ಪ್ರಯತ್ನಗಳನ್ನು ಪ್ರಶಂಸಿಸುತ್ತೇನೆ.

ಸಹಿ
(ಕೆ.ಸಿ. ವೀರಣ್ಣ)
ಕುಲಪತಿಗಳು

## ಸಂಪಾದಕೀಯ ನುಡಿ

ನಮ್ಮ ವಿಶ್ವವಿದ್ಯಾಲಯದ ಜೂಲೈ ರಿಂದ ಡಿಸೆಂಬರ್ 2022 ರವರೆಗಿನ ಸುದ್ದಿ ಪತ್ರದ ಸಂಪುಟ ಸಂಖ್ಯೆ–18 ಮತ್ತು ಸಂಚಿಕೆ–2ನ್ನು ನಿಮ್ಮ ಮುಂದಿಡಲು ನನಗೆ ಬಹಳ ಹರ್ಷವೆನಿಸುತ್ತಿದೆ. ಈ ನಿರ್ದೇಶನಾಲಯದಲ್ಲಿ ಸಿಬ್ಬಂದಿಯ ಕೊರತೆ ಮತ್ತು ಹೆಚ್ಚಿನ ಕೆಲಸದ ಹೊರೆಯಿಂದಾಗಿ ಈ ಸುದ್ದಿ ಪತ್ರವನ್ನು ಹೊರತರುವಲ್ಲಿ ವಿಳಂಬವಾಗಿದೆ. ಆದಾಗ್ಯೂ, ನಮ್ಮ ವಿಶ್ವವಿದ್ಯಾಲಯದ ಶಿಕ್ಷಕರು ಮತ್ತು ಇತರ ಸಿಬ್ಬಂದಿ ಸದಸ್ಯರು, ಬೋಧನೆ, ಸಂಶೋಧನೆ ಮತ್ತು ವಿಸ್ತರಣೆ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು ಸೇರಿದಂತೆ ಎಲ್ಲಾ ಪ್ರಮುಖ ಘಟನೆಗಳನ್ನು ಒಳಗೊಂಡ ಈ ಸುದ್ದಿ ಪತ್ರವನ್ನು ಹೊರತರಲು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಲಾಗಿದೆ. ಈ ಅವಧಿಯಲ್ಲಿ ಹಲವಾರು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ವಿಚಾರ ಸಂಕೀರ್ಣ ಸಮ್ಮೇಳನಗಳು, ಕಾರ್ಯಾಗಾರಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಪಶುವೈದ್ಯಕೀಯ ಕ್ಷೇತ್ರ, ಪ್ರಾಣಿ ವಿಜ್ಞಾನ ಕ್ಷೇತ್ರ, ಹೈನುವಿಜ್ಞಾನ ಕ್ಷೇತ್ರ, ಮತ್ತು ಮೀನುಗಾರಿಕೆ ಕ್ಷೇತ್ರಗಳಲ್ಲಿನ ಬೋಧನೆ, ಸಂಶೋಧನೆ ಮತ್ತು ವಿಸ್ತರಣೆಯನ್ನು ಬಲಪಡಿಸಲು ವಿಶ್ವವಿದ್ಯಾಲಯವು ಅನೇಕ ರಾಷ್ಟ್ರೀಯ ಸಂಸ್ಥೆಗಳೊಂದಿಗೆ ಒಡಂಬಡಿಕೆಗಳಿಗೆ ಸಹಿ ಹಾಕಿದೆ. ನಮ್ಮ ಹಲವಾರು ಶಿಕ್ಷಕರು ರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆಯುವ ಮೂಲಕ ನಮ್ಮ ವಿಶ್ವವಿದ್ಯಾಲಯಕ್ಕೆ ಹೆಮ್ಮೆ ತಂದಿದ್ದಾರೆ.

ಸಹಿ
(ಎನ್.ಎ. ಪಾಟೀಲ)
ಮುಖ್ಯ ಸಂಪಾದಕರು ಮತ್ತು ವಿಸ್ತರಣಾ ನಿರ್ದೇಶಕರು

## ಆಯೋಜಿತ ತರಬೇತಿಗಳು ಕಾರ್ಯಕ್ರಮಗಳು /ಸಮಾವೇಶಗಳು /ವಿಚಾರ ಸಂಕೀರಣಗಳು / ಪ್ರದರ್ಶನಗಳು /ಪಶು ಆರೋಗ್ಯ ಶಿಬಿರಗಳು /ಕ್ಷೇತ್ರ ದಿನಗಳು

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಕಪಪಮೀವಿವಿ–ಸಿವಿಎ–ರೇಬೀಸ್ ರೋಗನಿರ್ಣಯ ಪ್ರಯೋಗಾಲಯ, ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆ ಅನುಮೋದಿತ ರೇಬೀಸ್ ಪ್ರಯೋಗಾಲಯ ಇಲ್ಲಿ 14ನೇ ಜುಲೈ, 2022 ರಂದು "ಉದ್ದೇಶಿತ ದಕ್ಷಿಣ ಏಷ್ಯಾ ರೇಬೀಸ್ ಪ್ರಯೋಗಾಲಯಗಳ ನೆಟ್‌ವರ್ಕ್" ಎಂಬ ವಿಷಯದ ಬಗ್ಗೆ ವರ್ಚುವಲ್ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

- ಕಪಪಮೀವಿವಿ–ಸಿವಿಎ–ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ಕರ್ನಾಟಕ ಪಶುವೈದ್ಯಕೀಯ ಪರಿಷತ್ತು, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಕಾಮನ್‌ವೆಲ್ತ್ ಪಶುವೈದ್ಯಕೀಯ ಸಂಘದ ಸಹಯೋಗದೊಂದಿಗೆ ಕರ್ನಾಟಕ ರಾಜ್ಯದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುವೈದ್ಯರಿಗಾಗಿ "ಮೆದುಳಿನ ಮಾದರಿಯ ಸಂಗ್ರಹಣೆ ಮತ್ತು ರೇಬಿಸ್ ರೋಗನಿರ್ಣಯ" ಕುರಿತು ತರಬೇತಿ ಕಾರ್ಯಕ್ರಮವನ್ನು 2022ರ ಆಗಸ್ಟ 23, ಸೆಪ್ಟಂಬರ್ 2, 13, 21 ರಂದು ಆಯೋಜಿಸಲಾಯಿತು.

- ಡಾ॥ ಸಿ.ಎಂ. ಸಿಂಗ್ ರವರ ಜನ್ಮ ಶತಮಾನೋತ್ಸವ ವರ್ಷಾಚರಣೆಯ ಅಂಗವಾಗಿ ಪಶುವೈದ್ಯಕೀಯ ಮಹಾವಿದ್ಯಾಲಯವು ಡಾ॥ ಸಿ.ಎಂ. ಸಿಂಗ್ ಎಂಡೋಮೆಂಟ್ ಟ್ರಸ್ಟ್, ಬರೇಲಿ, ಉತ್ತರಪ್ರದೇಶದ ಸಹಯೋಗದೊಂದಿಗೆ "ಭಾರತೀಯ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಪಶುವೈದ್ಯಕೀಯ ವಿಜ್ಞಾನಗಳ ಪ್ರಗತಿ"ಯ ಕುರಿತು 26ನೇ ಆಗಸ್ಟ್, 2022 ರಂದು ರಾಷ್ಟ್ರೀಯ ವೆಬಿನಾರ್‌ನ್ನು ಆಯೋಜಿಸಲಾಯಿತು.

- ಕಪಪಮೀವಿವಿ–ಸಿವಿಎ–ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ಕರ್ನಾಟಕ ಪಶುವೈದ್ಯಕೀಯ ಪರಿಷತ್ತು ಹಾಗೂ ಕರ್ನಾಟಕದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಸಹಯೋಗದೊಂದಿಗೆ "ಪ್ರಾಣಿಗಳಲ್ಲಿ ರೇಬೀಸ್ ನಿಯಂತ್ರಣ" ದ ಕುರಿತು ತಾಂತ್ರಿಕ ವಿಚಾರ ಸಂಕಿರಣವನ್ನು 29ನೇ ಸೆಪ್ಟೆಂಬರ್, 2022 ರಂದು ಹಮ್ಮಿಕೊಳ್ಳಲಾಯಿತು.

- ಪಶುವೈದ್ಯಕೀಯ ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗದಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ಸರ್ಕಾರದ ಜೊತೆಗೂಡಿ "ಜೈವಿಕ ತಂತ್ರಜ್ಞಾನದಲ್ಲಿ ಕೌಶಲ್ಯ ವಿಜ್ಞಾನ ಕಾರ್ಯಕ್ರಮ" ಕುರಿತು ಕಾರ್ಯಾಗಾರವನ್ನು 10ನೇ ಅಕ್ಟೋಬರ್, 2022 ರಂದು ರಾಜ್ಯದ ಸರ್ಕಾರಿ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರಿಗಾಗಿ ಹಮ್ಮಿಕೊಳ್ಳಲಾಯಿತು.




- ಕಪಪಮೀವಿವಿ–ಸಿವಿಎ–ರೇಬೀಸ್ ರೋಗನಿರ್ಣಯ ಪ್ರಯೋಗಾಲಯವು ವಿಶ್ವ ಪ್ರಾಣಿ ಆರೋಗ್ಯ ಸಂಸ್ಥೆ ಮತ್ತು ಮಿಷನ್ ರೇಬೀಸ್‌ನ ಸಹಯೋಗದೊಂದಿಗೆ 28ನೇ ನವೆಂಬರ್, 2022 ರಿಂದ 02ನೇ ಡಿಸೆಂಬರ್, 2022 ರವರೆಗೆ "ಸಾಮೂಹಿಕ ನಾಯಿಗಳ ಲಸಿಕಾ ಕಾರ್ಯಕ್ರಮ" ದ ಕುರಿತು ಅಂತರ ರಾಷ್ಟ್ರೀಯ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಯಿತು



- ಕುಕ್ಕುಟ ವಿಜ್ಞಾನ ವಿಭಾಗವು ಕೇಂದ್ರೀಯ ಕೋಳಿ ಅಭಿವೃದ್ಧಿ ಸಂಸ್ಥೆ, ಹೆಸರಘಟ್ಟದ ಸಹಯೋಗದೊಂದಿಗೆ "ಆಧುನಿಕ ಕೋಳಿ ಸಾಕಾಣಿಕೆ" ಕುರಿತು ಆರು ದಿನಗಳ ತರಬೇತಿಯನ್ನು 22.11.2022 ರಿಂದ 03.12.2022 ರವರೆಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರಿನಲ್ಲಿ ಆಯೋಜಿಸಲಾಯಿತು.

- ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ "ಕರ್ನಾಟಕ ರಾಜ್ಯದಲ್ಲಿ ಸುಸ್ಥಿರ ಜಾನುವಾರು ಅಭಿವೃದ್ಧಿಗಾಗಿ ಸಂಬಂಧಿತ ಬಹು ಪಾಲುದಾರರಲ್ಲಿ ಸಂಶೋಧನೆ ಮತ್ತು ವಿಸ್ತರಣೆಯಲ್ಲಿನ ಅಂತರಗಳು" ಕುರಿತು ರಾಜ್ಯಮಟ್ಟದ ಕಾರ್ಯಾಗಾರವನ್ನು 6 ಮತ್ತು 7ನೇ ಡಿಸೆಂಬರ್, 2022ರಂದು ಆಯೋಜಿಸಲಾಯಿತು. ಸದರಿ ಕಾರ್ಯಕ್ರಮದಲ್ಲಿ 20 ಮಧ್ಯಸ್ಥ ಸಂಸ್ಥೆಗಳು ಭಾಗವಹಿಸಿದರು.

### ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ; ಜಾನುವಾರು ಸಂಶೋಧನೆ ಹಾಗೂ ಮಾಹಿತಿ ಕೇಂದ್ರ (ದೇವಣಿ), ಬೀದರ, ಪಶು ಸಂಗೋಪನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಬೀದರ ಹಾಗೂ ಬೀದರ–ಕಲಬುರಗಿ ಹಾಲು ಉತ್ಪಾದಕರ ಸಹಕಾರ ಒಕ್ಕೂಟ, ಕಲಬುರಗಿ ಇವುಗಳ ಸಂಯುಕ್ತಾಶ್ರಯದಲ್ಲಿ 13ನೇ ಅಗಸ್ಟ್, 2022 ರಂದು ಬೀದರ ತಾಲೂಕಿನ ಔರಾದ (ಎಸ್) ಗ್ರಾಮದಲ್ಲಿ ಆಜಾದಿ ಕಾ ಅಮೃತ ಮಹೋತ್ಸವ ನಿಮಿತ್ಯ ಹರ್ ಘರ್ ತಿರಂಗಾ ಅಭಿಯಾನದ ಭಾಗವಾಗಿ ಪಶು ಆರೋಗ್ಯ ಶಿಬಿರ/ವೈಜ್ಞಾನಿಕ ಹೈನುಗಾರಿಕೆ ಪದ್ಧತಿಗಳು ಪ್ರಾತ್ಯಕ್ಷತೆ/ಜಾನುವಾರುಗಳ ಚಿಕಿತ್ಸೆ ಶಿಬಿರ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 450 ವಿವಿಧ ಜಾನುವಾರುಗಳಿಗೆ ಲಸಿಕೆ ಹಾಗೂ ಚಿಕಿತ್ಸೆ ನೀಡಲಾಯಿತು. ಅದೇ ರೀತಿ ರೈತರಿಗೆ ವೈಜ್ಞಾನಿಕ ಹೈನುಗಾರಿಕೆ ತರಬೇತಿ ಹಾಗೂ ಪ್ರಾತ್ಯಕ್ಷತೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



### ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ಮಲೆನಾಡುಗಿಡ್ಡ ಸಂಶೋಧನೆ ಹಾಗೂ ಮಾಹಿತಿ ಕೇಂದ್ರದಡಿಯಲ್ಲಿ "ಮಲೆನಾಡುಗಿಡ್ಡ ತಳಿ ಸಾಕಾಣಿಕೆ, ಸಂರಕ್ಷಣೆಯ ಪ್ರಾಮುಖ್ಯತೆ ಹಾಗೂ ಹಸಿರು ಮೇವು ಉತ್ಪಾದನೆ" ಎಂಬ ವಿಷಯದ ಕುರಿತು 27ನೇ ಸೆಪ್ಟೆಂಬರ್, 2022 ರಂದು ರೈತರಿಗಾಗಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



- ವಿಸ್ತರಣಾ ಶಿಕ್ಷಣ ಕೇಂದ್ರ, ಶಿವಮೊಗ್ಗ ಇಲ್ಲಿ ಎರಡು ದಿನಗಳ "ವೈಜ್ಞಾನಿಕ ಕೋಳಿ ಸಾಕಾಣಿಕೆ ತರಬೇತಿ" ಕುರಿತು ತರಬೇತಿ ಕಾರ್ಯಕ್ರಮವನ್ನು 14–15ನೇ ಸೆಪ್ಟೆಂಬರ್, 2022ರವರೆಗೆ ರೈತರಿಗಾಗಿ ಆಯೋಜಿಸಲಾಗಿತ್ತು.



- ವಿಸ್ತರಣಾ ಶಿಕ್ಷಣ ಕೇಂದ್ರ, ಶಿವಮೊಗ್ಗ ಇವರು "ಕುಕ್ಕುಟ ಮತ್ತು ಪಶುವೈದ್ಯಕೀಯ ವಸ್ತು ಪ್ರದರ್ಶನ" ವನ್ನು 22ನೇ ಸೆಪ್ಟೆಂಬರ್, 2022ರಂದು ರೈತರಿಗಾಗಿ ಆಯೋಜಿಸಿದರು.



- ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಸೂರಗೊಂಡನಕೊಪ್ಪ, ಗ್ರಾಮದಲ್ಲಿ 13ನೇ ಸೆಪ್ಟೆಂಬರ್, 2022 ರಂದು ಜಾನುವಾರು ಚಿಕಿತ್ಸಾ ಶಿಬಿರ ಆಯೋಜಿಸಲಾಯಿತು.



## ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- ಜಾನುವಾರುಗಳಲ್ಲಿ ಯಶಸ್ವಿ ಕೃತಕ ಗರ್ಭಧಾರಣೆಯಲ್ಲಿನ ತೊಂದರೆಗಳು ಮತ್ತು ನಿವಾರಣೆ ಎಂಬ ವಿಷಯದಲ್ಲಿ ತರಬೇತಿ ಕಾರ್ಯಕ್ರಮವನ್ನು 12ನೇ ಅಗಸ್ಟ್, 2022 ರಂದು ಆಯೋಜಿಸಲಾಯಿತು.
- ವಿಸ್ತರಣಾ ಶಿಕ್ಷಣ ಕೇಂದ್ರ, ಹಾಸನ ಇವರು "ವೈಜ್ಞಾನಿಕ ಹಂದಿ ಸಾಕಣೆ" ಕುರಿತು ಎರಡು ದಿನಗಳ ರೈತರ ತರಬೇತಿ ಕಾರ್ಯಕ್ರಮವನ್ನು 29–30ನೇ ನವೆಂಬರ್, 2022ರವರೆಗೆ ರೈತರಿಗಾಗಿ ಆಯೋಜಿಸಿದರು.
- ವಿಸ್ತರಣಾ ಶಿಕ್ಷಣ ಕೇಂದ್ರ, ಹಾಸನ ಇವರು "ವೈಜ್ಞಾನಿಕ ಕೋಳಿ ಸಾಕಣೆ" ಕುರಿತು ಎರಡು ದಿನಗಳ ತರಬೇತಿಯನ್ನು 13–14ನೇ ಡಿಸೆಂಬರ್, 2022ರವರೆಗೆ ರೈತರಿಗಾಗಿ ಆಯೋಜಿಸಿದರು.
- ಭಾ.ಕೃ.ಅ.ಪ.–ಟಿ.ಎಸ್.ಪಿ. ಯೋಜನೆಯಡಿಯಲ್ಲಿ 16ನೇ ಆಗಸ್ಟ್, 2022 ರಂದು ಹಾಸನ ಜಿಲ್ಲೆಯ ಜಾಗರವಳ್ಳಿ ಗ್ರಾಮದಲ್ಲಿ ಪಶುಪಾಲನಾ ರೈತರೊಂದಿಗೆ ಸಂವಾದ ಕಾರ್ಯಕ್ರಮ ಮತ್ತು "ಸುಧಾರಿತ ಮೇವು ಉತ್ಪಾದನೆ ಹಾಗೂ ಪೋಷಣೆ" ಕುರಿತು ಫೋಲ್ಡರ್‌ನ್ನು ಡಾ॥ ಕೆ.ಸಿ. ವೀರಣ್ಣ, ಗೌರವಾನ್ವಿತ ಉಪಕುಲಪತಿಗಳು, ಕಪಪಮೀವಿವಿ, ಬೀದರ ಇವರು ಬಿಡುಗಡೆ ಮಾಡಿ ಪರಿಶಿಷ್ಟ ಪಂಗಡದ ಜಾನುವಾರು ರೈತರಿಗೆ ಸೂಪರ್ ನೇಪಿಯರ್ ರೂಟ್ ಸ್ಲಿಪ್‌ಗಳನ್ನು ವಿತರಣೆ ಮಾಡಿದರು.
- ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ ಹಾಗೂ ಪಶುಸಂಗೋಪನೆ ಹಾಗೂ ಪಶುವೈದ್ಯಕೀಯ ಸೇವಾ ಇಲಾಖೆ, ಕರ್ನಾಟಕ ಸರ್ಕಾರ, ಇವರ ಸಹಯೋಗದೊಂದಿಗೆ "ಪಶುವೈದ್ಯಕೀಯ ಕ್ಷೇತ್ರದಲ್ಲಿ ಅಲ್ಟ್ರಾಸೌಂಡ್ ಬಳಕೆ" ಕುರಿತು ಎರಡು ದಿನಗಳ ತರಬೇತಿ ಕಾರ್ಯಾಗಾರವನ್ನು 29–30ನೇ ಸೆಪ್ಟೆಂಬರ್, 2022ರವರೆಗೆ ಆಯೋಜಿಸಲಾಯಿತು.

## ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ

- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಮತ್ತು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಗ್ರಿಕಲ್ಚರಲ್ ಎಕ್ಸ್‌ಟೆನ್ಶನ್ ಮ್ಯಾನೇಜ್‌ಮೆಂಟ್ (ಮ್ಯಾನೇಜ್), ಹೈದರಾಬಾದ್ ಇವರ ಸಹಯೋಗದೊಂದಿಗೆ "ಸುಸ್ಥಿರ ಎಮ್ಮೆ ಸಾಕಾಣಿಕೆಗಾಗಿ ವಿಸ್ತರಣಾ ವಿಧಾನಗಳು" ಕುರಿತು ಮೂರು ದಿನಗಳ ರಾಷ್ಟ್ರ ಮಟ್ಟದ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು 23–25ನೇ ನವೆಂಬರ್, 2022ರವರೆಗೆ ಆಯೋಜಿಸಲಾಯಿತು.
- ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗನ 6ನೇ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರ (ದೇವಣಿ), ಬೀದರ ಇವರ ಸಹಯೋಗದೊಂದಿಗೆ 27ನೇ ಸಪ್ಟೆಂಬರ್, 2022 ರಂದು "ದೇಶಿ ಹಸು ಸಾಕಾಣಿಕೆ: ಸಾಧಕ–ಬಾಧಕಗಳು" ವಿಚಾರಗೋಷ್ಠಿ ಆಯೋಜಿಸಲಾಯಿತು.
- ಐಐಎಚ್‌ಆರ್, ಬೆಂಗಳೂರು ಮತ್ತು ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇವರ ಸಹಯೋಗದೊಂದಿಗೆ "ದೇಸಿ ಹಸು ಆಧಾರಿತ ತರಕಾರಿ ಉತ್ಪಾದನೆ" ಕುರಿತು ತರಬೇತಿ ಕಾರ್ಯಕ್ರಮವನ್ನು 8ನೇ ಡಿಸೆಂಬರ್, 2022 ರಂದು ಸುರಭಿ ಗೋ–ಜೈವಿಕ ಅನುಸಂಧಾನ ಕೇಂದ್ರ, ಗದಗದಲ್ಲಿ ಆಯೋಜಿಸಲಾಯಿತು.
- ಅಗ್ರಿಬಿಸಿನೆಸ್ ಇನ್‌ಕ್ಯುಬೇಶನ್ ಸೆಂಟರ್, ಭಾ.ಕೃ.ಅ.ಪ.–ನಿವೇದಿ, ಬೆಂಗಳೂರು ಮತ್ತು ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ ಇವರ ಸಹಯೋಗದೊಂದಿಗೆ "ಯುವಜನರಿಗಾಗಿ ಜಾನುವಾರು ಉದ್ಯಮಶೀಲತೆ ಅಭಿವೃದ್ಧಿ" ಕುರಿತು ತರಬೇತಿ ಕಾರ್ಯಕ್ರಮವನ್ನು 16–18ನೇ ಡಿಸೆಂಬರ್, 2022ರವರೆಗೆ ಆಯೋಜಿಸಲಾಯಿತು.

## ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು

- ಸನ್ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಸಾರಿಗೆ ಸಚಿವರು, ಕರ್ನಾಟಕ ಸರ್ಕಾರ ಇವರು ಮೀನುಗಾರಿಕಾ ಮಹಾವಿದ್ಯಾಲಯ, ಮಂಗಳೂರಿನಲ್ಲಿ 11ನೇ ಜುಲೈ, 2022 ರಂದು "ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ–2022" ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮೀನು ಕೃಷಿಕರ ಅನುಕೂಲಕ್ಕಾಗಿ "ಹೊಸ ಜಲಕೃಷಿ ತಂತ್ರಜ್ಞಾನ"ದ ಕುರಿತು ತರಬೇತಿ ಹಾಗೂ ಆಹಾರ ಮೀನುಗಳು, ಅಲಂಕಾರಿಕ ಮೀನುಗಳು ಮತ್ತು ಅಲಂಕಾರಿಕ ಸಸ್ಯಗಳ ಪ್ರದರ್ಶನವನ್ನು ಆಯೋಜಿಸಲಾಯಿತು.



## ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹಳ್ಳಿಖೇಡ

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿಯಲ್ಲಿ "ವೈಜ್ಞಾನಿಕ ಹೈನುಗಾರಿಕೆ" ಕುರಿತು 20–21 ಜುಲೈ, 2022ರವರೆಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



- ಭಾ.ಕೃ.ಅ.ಪ.–ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ "ಆಜಾದಿ ಕಾ ಅಮೃತ ಮಹೋತ್ಸವ"ದ ಅಂಗವಾಗಿ ಬೀದರ ಜಿಲ್ಲೆಯ ಔರಾದ (ಸಿರ್ಸಿ) ಗ್ರಾಮದಲ್ಲಿ ಜಾನುವಾರು ಆರೋಗ್ಯ ಶಿಬಿರ, ಕರುಗಳ ಪ್ರದರ್ಶನ ಹಾಗೂ ವೈಜ್ಞಾನಿಕ ಹೈನುಗಾರಿಕೆ ಪದ್ಧತಿಗಳ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು 13ನೇ ಆಗಸ್ಟ್, 2022 ರಂದು ಆಯೋಜಿಸಲಾಯಿತು.



## ಜಾನುವಾರು ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ನಾಗಮಂಗಲ

- ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕು ಕುರಿ ಮತ್ತು ಮೇಕೆ ಉತ್ಪಾದಕರ ಸಂಘದ ಸದಸ್ಯರಿಗಾಗಿ "ಲಾಭದಾಯಕ ಕುರಿ ಸಾಕಾಣಿಕೆ" ಕುರಿತು 31ನೇ ಡಿಸೆಂಬರ್, 2022 ರಂದು ಒಂದು ದಿನದ ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಹೆಸರಘಟ್ಟ–ಬೆಂಗಳೂರು

- ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು ಇವರು 3–6ನೇ ನವಂಬರ್, 2022ರವರೆಗೆ ಜಿ.ಕೆ.ವಿ.ಕೆ. ಆವರಣದಲ್ಲಿ ಆಯೋಜಿಸಲಾದ "ಕೃಷಿಮೇಳ –2022"ರಲ್ಲಿ ಕಪಪಮೀವಿವಿ, ಬೀದರ ವತಿಯಿಂದ ಮಳಿಗೆ ಹಾಕಲಾಯಿತು.



## ಮೀನುಗಾರಿಕೆ ಸಂಶೋಧನೆ ಮತ್ತು ಮಾಹಿತಿ ಕೇಂದ್ರ, ಭೂತನಾಳ–ವಿಜಯಪುರ

- "ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ" ಅಂಗವಾಗಿ "ವೈಜ್ಞಾನಿಕ ಮೀನು ಕೃಷಿ" ಕುರಿತು 8ನೇ ಜುಲೈ, 2022ರಂದು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



- ಅಂಜುಮನ್ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ವಿಜಯಪುರ ಇವರ ಸಹಯೋಗದೊಂದಿಗೆ "ಬಯೋಫ್ಲೋಕ್‌ನಲ್ಲಿ ಪ್ರಮಾಣಪತ್ರ ಕೋರ್ಸ್" ಕುರಿತು 10 ದಿನಗಳ ಕಾರ್ಯಾಗಾರವನ್ನು 12–21ನೇ ಜುಲೈ, 2022ರವರೆಗೆ ಆಯೋಜಿಸಲಾಯಿತು.
- "ವೈಜ್ಞಾನಿಕ ಮೀನು ಸಾಕಣೆ" ಕುರಿತು 26ನೇ ಜುಲೈ; 5ನೇ ಅಗಸ್ಟ್; 20ನೇ ಅಗಸ್ಟ್ ಮತ್ತು 27ನೇ ಅಗಸ್ಟ್, 2022 ರಂದು ಮೀನು ಕೃಷಿಕರಿಗಾಗಿ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.



- ಮ್ಯಾನೇಜ್–ಹೈದರಾಬಾದ ಇವರ ಸಹಯೋಗದೊಂದಿಗೆ "ಸಂಯೋಜಿತ ಮೀನು ಕೃಷಿಯಲ್ಲಿ ಇತ್ತೀಚಿನ ಬೆಳವಣಿಗೆಗಳು" ಕುರಿತು 13–15ನೇ ಸೆಪ್ಟೆಂಬರ್, 2022ರವರೆಗೆ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.
- ಶರಣಬಸವ ವಿಶ್ವವಿದ್ಯಾಲಯ, ಕಲಬುರಗಿ ಇಲ್ಲಿನ ಪ್ರಾಣಿಶಾಸ್ತ್ರ ವಿಭಾಗದ ಎಂ.ಎಸ್ಸಿ. ವಿದ್ಯಾರ್ಥಿಗಳಿಗಾಗಿ 7ನೇ ನವೆಂಬರ್, 2022ರಂದು "ವೈಜ್ಞಾನಿಕ ಮೀನು ಸಾಕಣೆ" ಕುರಿತು ಒಂದು ದಿನದ ತರಬೇತಿ ಕಾರ್ಯಕ್ರಮ ಆಯೋಜಿಸಲಾಯಿತು.
- ಮೀನು ಕೃಷಿಕರಿಗಾಗಿ "ಒಳನಾಡಿನಲ್ಲಿ ಸೀಗಡಿ ಸಾಕಾಣಿಕೆ" ಕುರಿತು 6ನೇ ಡಿಸೆಂಬರ್, 2022ರಂದು ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



## ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ–ಮಂಗಳೂರು

- ಪೆಟ್ರೋಲಿಯಮ್ ಉತ್ಪನ್ನಗಳ ಸಂರಕ್ಷಣೆ ಹಾಗೂ ಇಂಧನ ದಕ್ಷ ಪಂಪ್‌ಗಳ ಜಾಗೃತಿಯ ಕುರಿತು' ಒಂದು ದಿನದ ಕೃಷಿ ಕಾರ್ಯಾಗಾರಗಳನ್ನು 21ನೇ ಜುಲೈ, 2022 ರಂದು ಉಳ್ಳಾಲ ತಾಲೂಕಿನ ಪಾವೂರು ಗ್ರಾಮದಲ್ಲಿ ಹಾಗೂ 10ನೇ ಆಗಸ್ಟ್, 2022 ರಂದು ಬೆಳ್ತಂಗಡಿ ತಾಲೂಕಿನ ಕಲ್ಲೇರಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.



- ಭತ್ತದಲ್ಲಿ ಪರಿಸರ ಸ್ನೇಹಿ ಪೀಡೆಗಳ ನಿರ್ವಹಣೆ' ಕುರಿತು ಪ್ರಾತ್ಯಕ್ಷಿಕೆಯನ್ನು 12ನೇ ಆಗಸ್ಟ್, 2022 ರಂದು ಹಮ್ಮಿಕೊಳ್ಳಲಾಯಿತು.



- ತೆಂಗು, ಅಡಿಕೆ, ಕರಿಮೆಣಸು, ಗೋಡಂಬಿ ಮತ್ತು ಮಾವು ಬೆಳೆಗಳಲ್ಲಿ ರೋಗ ಮತ್ತು ಕೀಟ ಬಾಧೆಯ ಲಕ್ಷಣಗಳ ಗುರುತಿಸುವಿಕೆ ಕುರಿತು ಪ್ರಾತ್ಯಕ್ಷಿಕೆಯನ್ನು ಪರಿಕರ ಮಾರಾಟಗಾರರಿಗೆ 22ನೇ ಮತ್ತು 25ನೇ ಜುಲೈ, 2022 ರಂದು ಹಮ್ಮಿಕೊಳ್ಳಲಾಯಿತು.



- ಕೃಷಿ ಪರಿಕರ ಮಾರಾಟಗಾರರಿಗೆ 'ಬೀಜೋಪಚಾರದ' ಕುರಿತು 22ನೇ ಜುಲೈ, 2022ರಂದು ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಯಿತು.



- ಕೃಷಿ ವಿಸ್ತರಣಾ ಸೇವೆಯಲ್ಲಿ ಡಿಪ್ಲೊಮೊ ಶಿಭಿರಾರ್ಥಿಗಳಿಗೆ ಮ್ಯಾನೇಜ್, ಹೈದರಾಬಾದ್ ಪ್ರಾಯೋಜಿತ ಕೃಷಿ ಪರಿಕರ ಮಾರಾಟಗಾರರಿಗೆ 'ಟೊಮೆಟೊ ಕೆಚಪ್ ಮತ್ತು ಪಪಾಯ ಟೂಟಿ ಫ್ರೂಟಿ ತಯಾರಿಕೆ' ಕುರಿತು ಪ್ರಾತ್ಯಕ್ಷಿಕೆಯನ್ನು 24ನೇ ಸೆಪ್ಟೆಂಬರ್, 2022 ರಂದು ಹಮ್ಮಿಕೊಳ್ಳಲಾಯಿತು.



## ಕೃಷಿ ವಿಜ್ಞಾನ ಕೇಂದ್ರ, ದಕ್ಷಿಣ ಕನ್ನಡ–ಮಂಗಳೂರು

- ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಕಾಜೂರೂ ಗ್ರಾಮದಲ್ಲಿ 'ಕರಾವಳಿ ಪ್ರದೇಶದಲ್ಲಿ ಮೇಕೆಗಳ ಉತ್ಪಾದನಾ ಸಾಮರ್ಥ್ಯದ ಮೇಲೆ ಖನಿಜ ಮಿಶ್ರಣದ ಪ್ರಭಾವ' ಕುರಿತು 1ನೇ ಸೆಪ್ಟೆಂಬರ್, 2022ರಂದು ಒಂದು ದಿನದ ರೈತರ ಸಾಮರ್ಥ್ಯಾಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು.



# ಇತರೆ ಆಯೋಜಿತ ಕಾರ್ಯಕ್ರಮಗಳು

## ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು

- ಕಪಪಮೀವಿವಿ, ಬೀದರ್‌ನ 16ನೇ ಅಂತರ ಮಹಾವಿದ್ಯಾಲಯಗಳ ಕ್ರೀಡಾಕೂಟವನ್ನು ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ 2022ರ ನವೆಂಬರ್ 17 ರಿಂದ 22 ರವರೆಗೆ ಆಯೋಜಿಸಲಾಯಿತು. ಈ ಕ್ರೀಡಾಕೂಟದಲ್ಲಿ ವಿಶ್ವವಿದ್ಯಾಲಯದ ಎಂಟು ಮಹಾವಿದ್ಯಾಲಯಗಳಿಂದ (ಪಶುವೈದ್ಯಕೀಯ, ಹೈನು, ಮೀನುಗಾರಿಕೆ) 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಅಥ್ಲೆಟಿಕ್ಸ್ ಸ್ಪರ್ಧೆಗಳಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ ಹಾಗೂ ಗುಂಪು ಸ್ಪರ್ಧೆಗಳಲ್ಲಿ ಬೆಂಗಳೂರಿನ ಪಶುವೈದ್ಯಕೀಯ ಮಹಾವಿದ್ಯಾಲಯವು ವಿಜೇತರಾದರು.






## ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ

- ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ ಹಾಗೂ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಸಹಯೋಗದೊಂದಿಗೆ 10ನೇ ಆಗಸ್ಟ್, 2022 ರಂದು ನಂದಿನಗರ ಆವರಣದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ನಿಮಿತ್ಯ ಹರ್–ಘರ್ ತಿರಂಗಾ ಅಭಿಯಾನವನ್ನು ಆಯೋಜಿಸಲಾಯಿತು.




- ಆಜಾದಿ ಕಾ ಅಮೃತ್ ಮಹೋತ್ಸವದ ಅಂಗವಾಗಿ 14ನೇ ಆಗಸ್ಟ್, 2022 ರಂದು ಪರಿಶಿಷ್ಟ ವರ್ಗದ ರೈತರಿಗಾಗಿ "ಮನೆ ಹಿತ್ತಲಿನಲ್ಲಿ ನಾಟಿ ಕೋಳಿ ಸಾಕಾಣಿಕೆ" ಎಂಬ ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಅನುದಾನಿತ ಕಾರ್ಯಕ್ರಮವನ್ನು ಪಶುವೈದ್ಯಕೀಯ ಆಸ್ಪತ್ರೆ, ಔರಾದ್(ಬಿ)ನಲ್ಲಿ ಆಯೋಜಿಸಲಾಯಿತು.



- 'ವಿಶ್ವ ರೇಬೀಸ್ ದಿನ–2022' ಅಂಗವಾಗಿ ಬ್ರೀಮ್ಸ್ ಆಸ್ಪತ್ರೆ, ಬಿದರ ಇವರ ಸಹಯೋಗದೊಂದಿಗೆ ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರನ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರಿಗಾಗಿ 'ಪ್ರೀ–ಎಕ್ಸ್‌ಪೋಸರ್ ಪ್ರೊಫಿಲ್ಯಾಕ್ಸಿಸ್ ವ್ಯಾಕ್ಸಿನೇಷನ್' ಕಾರ್ಯಕ್ರಮವನ್ನು 28ನೇ ಸೆಪ್ಟೆಂಬರ್, 2022 ರಂದು ಆಯೋಜಿಸಲಾಯಿತು

## ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

- ಶ್ರೀ ಬೋಜ್ಯಾನಾಯ್ಕ, ಮಾನ್ಯ ವ್ಯವಸ್ಥಾಪಕ ಮಂಡಳಿ ಸದಸ್ಯರು 13ನೇ ಸೆಪ್ಟೆಂಬರ್, 2022ರಂದು ಸೂರಗೊಂಡನಕೊಪ್ಪ, ದಾವಣಗೆರೆ (ಜಿಲ್ಲೆ)ಯಲ್ಲಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಜಾನುವಾರು ಚಟುವಟಿಕೆಗಳ ಹಸ್ತಪ್ರತಿ ಬಿಡುಗಡೆ ಮಾಡಿದರು ಹಾಗೂ ಮೇವಿನ ಕಡ್ಡಿಗಳ ಮತ್ತು ಖನಿಜ ಮಿಶ್ರಣ ವಿತರಿಸಿದರು.



- ಭಾ.ಕೃ.ಅ.ಪ.–ಎಸ್ಸಿಎಸ್ಪಿ ಅನುದಾನದಡಿ 'ಕೋಳಿ ಸಾಕಾಣಿಕೆಯಲ್ಲಿ ಉದ್ಯಮಶೀಲತೆ' ಕುರಿತು ಆಯೋಜಿಸಲಾದ ತರಬೇತಿ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಒಂದು ತಿಂಗಳ ಸ್ವರ್ಣಧಾರ ಕೋಳಿಮರಿಗಳ ವಿತರಣೆ ಮಾಡಲಾಯಿತು.



## ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ

- "ಹವಾಮಾನ ಬದಲಾವಣೆ ಮತ್ತು ಪಶುಸಂಗೋಪನೆ" ಕುರಿತು 'ರೈತರು–ವಿಜ್ಞಾನಿಗಳ ಸಂವಾದ ಕಾರ್ಯಾಗಾರ'ವನ್ನು 1ನೇ ಅಗಸ್ಟ್, 2022ರಂದು ಆಯೋಜಿಸಲಾಯಿತು.

## ಕೃಷಿ ವಿಜ್ಞಾನ ಕೇಂದ್ರ, ಮಂಗಳೂರು

- ಈಶಾ ಫೌಂಡೇಶನ್‌ನ ಸ್ವಯಂಸೇವಕರ ಸಹಯೋಗದೊಂದಿಗೆ 'ಮಣ್ಣು ಉಳಿಸಿ ಅಭಿಯಾನ'ವನ್ನು 8ನೇ ಜುಲೈ, 2022 ರಂದು ಕೃಷಿ ವಿಜ್ಞಾನ ಕೇಂದ್ರದ ಸಭಾಂಗಣದಲ್ಲಿ ಹಾಗೂ 15ನೇ ಸೆಪ್ಟೆಂಬರ್, 2022ರಂದು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಯಿತು.




- "ಭತ್ತದಲ್ಲಿ ಮೆಗ್ನೀಷಿಯಂ ಸಲ್ಫೇಟ್‌ನ ಬಳಕೆ" ಕುರಿತು ಒಂದು ದಿನದ ಹೊರಾಂಗಣ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು 1ನೇ ಸೆಪ್ಟೆಂಬರ್, 2022ರಂದು ಬೆಳ್ತಂಗಡಿ ತಾಲೂಕಿನ ಬಡಗ ಕಾರಂದೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.



- “ಕರಾವಳಿ ಪ್ರದೇಶದ ಭತ್ತದಲ್ಲಿ ಪೊಟ್ಯಾಷಿಯಂ ಪೋಷಕಾಂಶದ ನಿರ್ವಹಣೆ” ಕುರಿತು ಒಂದು ದಿನದ ಹೊರಾಂಗಣ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮವನ್ನು 12ನೇ ಸೆಪ್ಟೆಂಬರ್, 2022ರಂದು ಪುತ್ತೂರು ತಾಲೂಕಿನ ಹಿರೇಬಂಡಾಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು.

## ಪ್ರಶಸ್ತಿಗಳು/ಮನ್ನಣೆಗಳು:

| # | ವಿಜ್ಞಾನಿಯ ಹೆಸರು ಮತ್ತು ಸಂಸ್ಥೆ | ಪ್ರಶಸ್ತಿ | ದಿನಾಂಕ | ಆಯೋಜಕರು |
|---|---|---|---|---|
| 1 | ಪ್ರೊ. ಕೆ.ಸಿ. ವೀರಣ್ಣ<br>ಮಾನ್ಯ ಕುಲಪತಿಗಳು | ನ್ಯಾಶನಲ್ ಫೆಲೊ | 4–5 ನವೆಂಬರ್ 2022 | ಐ.ವಿ.ಇ.ಎಫ್. ಪುದುಚೇರಿ ಹಾಗೂ ಬಿರ್ಸಾ ಕೃಷಿ ವಿಶ್ವವಿದ್ಯಾಲಯ, ರಾಂಚಿ ಜಾರ್ಖಂಡ್ |
| 2 | ಡಾ. ಪ್ರಕಾಶಕುಮಾರ ರಾಠೋಡ<br>ಸಹಾಯಕ ಪ್ರಾಧ್ಯಾಪಕರು | ಮೌಖಿಕ ಪ್ರಶಸ್ತಿಗಾಗಿ ಪ್ರಥಮ ಪ್ರಶಸ್ತಿ | 4–5 ನವೆಂಬರ್ 2022 | ಐ.ವಿ.ಇ.ಎಫ್. ಪುದುಚೇರಿ ಹಾಗೂ ಬಿರ್ಸಾ ಕೃಷಿ ವಿಶ್ವವಿದ್ಯಾಲಯ, ರಾಂಚಿ ಜಾರ್ಖಂಡ್ |
| 3 | ಡಾ॥ ಪವಿತ್ರ, ಬಿ.ಎಚ್.<br>ಸಹಾಯಕ ಪ್ರಾಧ್ಯಾಪಕರು<br>ಪ.ವೈ.ಮ., ಬೆಂಗಳೂರು | ‘ಮೌಖಿಕ ಪ್ರಸ್ತುತಿ’ಗಾಗಿ ದ್ವಿತೀಯ ಪ್ರಶಸ್ತಿ | 2–4ನೇ ನವಂಬರ್, 2022 | ಐ.ಎಸ್.ವಿ.ಪಿ.ಟಿ., ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಾಮಕ್ಕಲ್, ತಮಿಳುನಾಡು |
| 4 | ಡಾ॥ ಕೆ. ವೈಭವಿ<br>ಸ್ನಾತಕೋತ್ತರ ವಿದ್ಯಾರ್ಥಿ<br>ಪ.ವೈ.ಮ., ಬೆಂಗಳೂರು | ‘ಪೋಸ್ಟರ್ ಪ್ರಸ್ತುತಿ’ಗಾಗಿ ಪ್ರಥಮ ಪ್ರಶಸ್ತಿ | 2–4ನೇ ನವಂಬರ್, 2022 | ಐ.ಎಸ್.ವಿ.ಪಿ.ಟಿ., ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಾಮಕ್ಕಲ್, ತಮಿಳುನಾಡು |
| 5 | ಡಾ॥ ವೈ. ಮುರಳಿಧರ<br>ಸ್ನಾತಕೋತ್ತರ ವಿದ್ಯಾರ್ಥಿ<br>ಪ.ವೈ.ಮ., ಬೆಂಗಳೂರು | ‘ಮೌಖಿಕ ಪ್ರಸ್ತುತಿ’ಗಾಗಿ ಪ್ರಥಮ ಪ್ರಶಸ್ತಿ | 2–4ನೇ ನವಂಬರ್, 2022 | ಐ.ಎಸ್.ವಿ.ಪಿ.ಟಿ., ಪಶುವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ನಾಮಕ್ಕಲ್, ತಮಿಳುನಾಡು |
| 6 | ಪಶುವೈಕೀಯ ಮಹಾವಿದ್ಯಾಲಯ, ಹಾಸನ | ಅತ್ಯುತ್ತಮ ಮಳಿಗೆಗಾಗಿ ಪ್ರಥಮ ಪ್ರಶಸ್ತಿ | 8ನೇ ನವಂಬರ್, 2022 | ಕೃಷಿ ಮಹಾವಿದ್ಯಾಲಯ, ಹಾಸನ |
| 7 | ಪಶುವೈಕೀಯ ಮಹಾವಿದ್ಯಾಲಯ, ಹಾಸನ | ಸಮಗ್ರ ಪ್ರಶಸ್ತಿ | 17–21ನೇ ನವಂಬರ್, 2022 | ಪಶುವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು |

ಸಂಪಾದಕರು ಮತ್ತು ಪ್ರಕಾಶಕರು :
**ಡಾ. ಎನ್.ಎ. ಪಾಟೀಲ**
ವಿಸ್ತರಣಾ ನಿರ್ದೇಶಕರು
ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ,
ಅಂಚೆ ಸಂ. 06, ನಂದಿನಗರ, ಬೀದರ–585 226
ಕರ್ನಾಟಕ, ಭಾರತ
ದೂ. : 08482-245313; ಮೊಬೈಲ್ : 9448604646

ತೆರೆದ–ಅಂಚೆ

ಮುದ್ರಿತ ವಿಷಯ

ಗೆ,

ವಿತರಣೆವಾಗಿಲ್ಲದಿದ್ದರೆ ದಯವಿಟ್ಟು ಈ ವಿಳಾಸಕ್ಕೆ ಹಿಂದುರುಗಿಸಿ :
**ವಿಸ್ತರಣಾ ನಿರ್ದೇಶಕರು**
**ಕಪಪಮೀವಿವಿ**, ಅಂಚೆ ಸಂ. 6,
ನಂದಿನಗರ, ಬೀದರ–585 226. ಕರ್ನಾಟಕ

